# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 649 |
| 2 | ಸದಸ್ಯರ ಹೆಸರು | : | ಡಾ॥ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) |
| 3 | ಉತ್ತರಿಸುವ ದಿನಾಂಕ | : | 12-03-2020 |
| 4 | ಉತ್ತರಿಸುವವರು | : | ಮಾನ್ಯ ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದ ಕೆಂಗೇರಿಯ ಬೃಂದಾವನ ಬಡಾವಣೆ ಬಳಿ ವೃಷಭಾವತಿ ನದಿಗೆ ಟ್ಯಾಂಕರ್ ಮೂಲಕ ಕೈಗಾರಿಕಾ ತ್ಯಾಜ್ಯ ಸುರಿಯುತ್ತಿರುವ ಕುರಿತು ಮಾಧ್ಯಮದಲ್ಲಿ ವರದಿಯಾಗಿರುವುದು ನಿಜವೇ: | ಹೌದು. |
| ಆ) | ಹಾಗಿದ್ದಲ್ಲಿ, ಈ ಕುರಿತು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು? | ಪ್ರಾದೇಶಿಕ ಅಧಿಕಾರಿ, ರಾಜರಾಜೇಶ್ವರಿನಗರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ರವರು ವೃತ್ತ ನಿರೀಕ್ಷಕರು, ಕೆಂಗೇರಿ ಪೊಲೀಸ್ ಠಾಣೆ, ಮೈಸೂರು ರಸ್ತೆ, ಕೆಂಗೇರಿ, ಬೆಂಗಳೂರು ರವರಿಗೆ ಪತ್ರ ಸಂಖ್ಯೆ: ಮಾನಮ/ಪ್ರಾ.ಕ-ರಾರಾನ/ವೃಷಭಾವತಿ ಕಣಿವೆ/2019-20/1361 ದಿನಾಂಕ: 23-01-2020 ರಂದು ಸದರಿ ವಿಷಯವಾಗಿ ದೂರು ನೀಡಿರುತ್ತಾರೆ. ಅದರಂತೆ, ಈಗಾಗಲೇ ಕೆಂಗೇರಿ ಪೋಲೀಸ್ ಠಾಣೆಯಲ್ಲಿ ಮೊಕದ್ದಮೆ. ಸಂ.13/2020 ಕಲಂ 269,277,290 ಐಪಿಸಿ ಪ್ರಕಾರ ಪ್ರಕರಣ ದಾಖಲಿಸಿ, ತನಿಖೆಯನ್ನು ಕೈಗೊಳ್ಳಲಾಗಿರುತ್ತದೆ.<br><br>ಈ ಘಟನೆಯ ನಂತರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಮಾರ್ಷಲ್‌ಗಳನ್ನು ಈ ಪ್ರದೇಶದಲ್ಲಿ ಗಸ್ತು ತಿರುಗಲು ನಿಯೋಜಿಸಲಾಗಿರುತ್ತದೆ ಹಾಗೂ ಈ ಪ್ರದೇಶದಲ್ಲಿ ಸಿ.ಸಿ.ಟಿ.ವಿ ಯನ್ನು ಅಳವಡಿಸಲು ಕ್ರಮವಹಿಸಲಾಗುತ್ತಿದೆ. |

ಸಂಖ್ಯೆ: ನಅಇ 39 ಎಂಎನ್‌ವೈ 2020

(ಬಿ.ಎಸ್. ಯಡಿಯೂರಪ್ಪ.)
ಮುಖ್ಯಮಂತ್ರಿ